# 9

# ಕಾಳಜಿ ತೋರಿದ ಮನುಷ್ಯನು

## (2 ಅರಸು 6:1-7)

ಲೇಖಕರ ವಿಂಗಡಣೆಯ ಅನುಸಾರ ಕಥೆಗಳು ಅದರ ಉದ್ದೇಶಕ್ಕೆ ತಕ್ಕಂತೆ ಇರುತ್ತವೆ. ಕೆಲವು "ಸಣ್ಣಕಥೆಗಳು" ಎಂದು ಕರೆಯಲ್ಪಡುತ್ತವೆ ಕೆಲವು ಒಂದು ವೇಳೆ ಬಹಳ ಚಿಕ್ಕವಾಗಿದ್ದರೆ ಅವುಗಳು "ಚಿಕ್ಕ ಕಥೆಗಳು" ಎಂಬ ಹೆಸರನ್ನು ಪಡೆಯುತ್ತವೆ. ಈ ಪಾಠವು ಎಲೀಷನ ಬಗೆಗಿನ "ಚಿಕ್ಕ ಚಿಕ್ಕ ಕಥೆಯ" ಮಧ್ಯದಲ್ಲಿ ಬರುತ್ತಿದ್ದು ಅತ್ಯುಚ್ಚ ಸರಕಾರಿ ಅಧಿಕಾರಿಗಳೊಂದಿಗೆ ದೀರ್ಘ ವಾದ ವ್ಯವಹಾರದ ಮಧ್ಯದ ವಾಡಿಕೆಯಾಗಿರುವುದನ್ನು ನಾವು ಕಾಣುತ್ತೇವೆ. ನಾನು ಇದನ್ನು ನಮ್ಮ ಈ ಸರಣಿಗಳಲ್ಲಿ ಇರಿಸಿದ್ದೇನೆ. ಯಾಕೆಂದರೆ ಇದು ಹಿಂದಿನ ಪಾಠದ ಜೊತೆ ಸರಿಯಾಗಿ ಹೊಂದಿಕೆಯಾಗುತ್ತದೆ. ನಾನು ಆ ಅಧ್ಯಯನವನ್ನು "ಹಂಚಿಕೊಂಡ ಮನುಷ್ಯನು" ಎಂದು ಮತ್ತು ಈ ಪಾಠವನ್ನು "ಕಾಳಜಿ ತೋರಿದ ಮನುಷ್ಯನು" ಎಂದು ಕರೆದಿದ್ದೇನೆ.

ಈ ವಿವರಣೆಯು ಚಿಕ್ಕದ್ದಾಗಿರುವುದರಿಂದ ಮತ್ತು ಪ್ರಾಮುಖ್ಯವಲ್ಲದ ಸಮಸ್ಯೆಯನ್ನು ಇದು ಸಂಬೋಧಿಸುತ್ತಿರುವುದರಿಂದ ಇದನ್ನು "ಎಲೀಷನು ಹೇಳಿದ ಕಥೆಗಳಲ್ಲಿ ಬಲು ಅತ್ಯಲ್ಪ ವಾದುದ್ದು" ಎಂದು ಕರೆಯಲ್ಪಡುತ್ತದೆ.[1] ಎಲೀಷನ ಜೀವಿತದ ಕೆಲ ಭಾಗಗಳು ಕಥೆಯ ಮೇಲೆ ವಿಮರ್ಶೆ ಮಾಡುವುದನ್ನೂ ಕೂಡ ಲಕ್ಷಿಸದು, ಇತರರು ಇದನ್ನು ಒಂದೆರಡು ಸಾಲುಗಳಲ್ಲಿ ಹೇಳಿ ಮುಗಿಸಿಬಿಡುತ್ತಾರೆ. ಹೇಗೋ Burton Coffman ರವರು ಸೂಚಿಸುವುದೇನೆಂದರೆ, "ಇದು ಗುರುತರವಾದ ಪ್ರವಾದಿಯಿಂದ ಮಾಡಲ್ಪಟ್ಟ ನಿಜವಾಗಿಯೂ ಒಂದು ಬಲು ಮಹತ್ವದ ಅದ್ಭುತಕಾರ್ಯವಾಗಿದೆ. ಯಾಕೆ? ಬಡವನ ಹೃದಯದ ಮೇಲೆ ಒತ್ತಡವನ್ನು ತರುವ ಸಮಸ್ಯೆಗೋಸ್ಕರ ದೇವರಿಗಿರುವ ಕಾಳಜಿಯ ಕುರಿತು ಇದು ಒತ್ತಿ ಹೇಳುತ್ತದೆ."[2]

### ಆಗ ಒಂದು "ಕ್ಷುಲ್ಲಕವಾದ" ಸಮಸ್ಯೆಯು

#### ಮನುಷ್ಯನು ಏನು ಮಾಡಬಲ್ಲನು

ನಮ್ಮ ಕಥೆಯು ಪ್ರಾರಂಭವಾಗುತ್ತಿದ್ದಂತೆಯೇ, ಎಲೀಷನು ತಿರುಗಿ "ಕೆಲ ಪ್ರವಾದಿ ಮಂಡಲಿಯವರೊಡನೆ" ಇದ್ದಾನೆ, ಪ್ರಾಯಶಃ ಅವರು ಯೋರ್ದನ ಹೊಳೆಯ ಹತ್ತಿರದಲ್ಲಿನ (ನೋಡಿರಿ 2:5) ಯೆರಿಕೋವಿನ ಶಾಲೆಯವರಾಗಿರಬಹುದು (ನೋಡಿರಿ 6:2). ಎಲೀಷನ ಸೇವೆಯ ಯಶಸ್ಸಿನ ವಾಸ್ತವತೆಯನ್ನು ಪ್ರವಾದಿಮಂಡಲಿಯ ಸದಸ್ಯರ ಸಂಖ್ಯೆಯು ತಮ್ಮ ವ್ಯವಸ್ಥೆಯಲ್ಲಿ ಬೆಳೆಯುತ್ತಿರುವುದರಲ್ಲಿ ಕಾಣಬಹುದು. "ಪ್ರವಾದಿ ಮಂಡಲಿಯವರು ಎಲೀಷನಿಗೆ ನಾವು ನಿನ್ನ ಜೊತೆಯಲ್ಲಿ ವಾಸಿಸುತ್ತಿರುವ ಸ್ಥಳವು ಬಲು ಇಕ್ಕಟ್ಟಾಗಿದೆ" (6:1) ಎಂದು ಹೇಳಿದರು. ಮದುವೆಯಾದ ಪ್ರವಾದಿಗಳು ಖಾಸಗಿ ವಾಸಸ್ಥಾನದಲ್ಲಿ ಇರುತ್ತಿದ್ದರು (ನೋಡಿರಿ 4:1-7), ಆದರೆ ಒಂಟಿಗರಾದ ಪ್ರವಾದಿಗಳು ಜೊತೆಯಲ್ಲಿ ಜೀವಿಸುತ್ತಿದ್ದರು. ಕೊನೇ ಪಕ್ಷ ಅವರಿಗೆ ಒಂದೇ ಕೂಟದ ಸ್ಥಳ ಮತ್ತು ಒಂದೇ ಸಾಮಾನ್ಯವಾದ ಊಟದ ಕೋಣೆಯನ್ನು ಹೊಂದಿದ್ದರು (ನೋಡಿರಿ 4:38-44). ಆ ಕಟ್ಟಡವು ಅವರ ಸಂಖ್ಯೆಗೆ ಈಗ ಬಲು ಸಣ್ಣದೂ ಆಗಿತ್ತು. ಹೊಂದಿರುವಂತ ಈ ಸಮಸ್ಯೆಯು ಇದು ಒಳ್ಳೇಯದು ಆಗಿದೆ ಆದರೆ ಇದು ಒಂದು ಸಾರಿ ಬೆಳೆಯುವದು ಮುಂದುವರೆದರೆ ಈ ಸಮಸ್ಯೆಯ ಬಗೆಗೆ ನಾವು ಗಮನವಾಗಿ ಚಿಂತಿಸಬಹುದು.

ಪ್ರವಾದಿ ಮಂಡಲಿಯವರು ದೊಡ್ಡದಾದ ಮನೆಯನ್ನು ಕಟ್ಟಿಸಿಕೊಳ್ಳಲು ಒಬ್ಬ ಗುತ್ತಿಗೆದಾರನನ್ನು ನೇಮಿಸಿಕೊಳ್ಳುವಷ್ಟು ಹಣ ಅವರಲ್ಲಿ ಇರಲಿಲ್ಲ. ಹಾಗಾದರೆ ಈ ಸಮಸ್ಯೆಯನ್ನು ಅವರು ಹೇಗೆ ನಿವಾರಿಸಿಕೊಂಡರು? ಅವರು ತಮ್ಮಿಂದ ತಾವೇ ಕಟ್ಟಡವನ್ನು ನಿರ್ಮಿಸಿಕೊಂಡರು. ಆದದರಿಂದ ಅವರು ಎಲೀಷನಿಗೆ "ನಾವು ಯೊರ್ದನಿಗೆ ಹೋಗಿ ಅಲ್ಲಿ ಪ್ರತಿಯೊಬ್ಬನೂ ಒಂದೊಂದು ತೊಲೆಯನ್ನು ಕಡಿದುಕೊಂಡು ಬಂದು ನಮಗೋಸ್ಕರ ಒಂದು ಮನೆಯನ್ನು ಮಾಡಿಕೊಳ್ಳೋಣ" ಎಂದರು (ವಚನ 2ಎ). ಪ್ರಾಚೀನ ಬರಹಗಾರರ ಪ್ರಕಾರ, ಮರಗಳು ಮತ್ತು ಪೊದೆಗಳು ಯೊರ್ದನ್ ಹೊಳೆಯ ತೀರದಲ್ಲಿ ಹೇರಳವಾಗಿದ್ದು ಮೃದುವಾದ ನೇರವಾಗಿ ಎತ್ತರಕ್ಕೆ ಬೆಳೆಯುವ ಮತ್ತು ಹುಣಸೆ ಮರಗಳು ವಿಪುಲವಾಗಿದ್ದವು.[3] ಆ ವಿದ್ಯಾರ್ಥಿಗಳು ತಾವು ದೇವರಿಗೆ ತಮ್ಮ ಜೀವಿತವನ್ನು ಒಪ್ಪಿಸಿದಂತೆ ಈ ಕೆಲಸವೂ ಕೂಡಾ "ಬಲು ಒಳ್ಳೇಯದು" ಆಗಿರುತ್ತದೆ ಎಂದು ಯೋಚಿಸಿರಲಿಲ್ಲ ಎಂಬುದನ್ನು ಗಮನಿಸಿರಿ. ಈ ಕಟ್ಟಡಗಳನ್ನು ಉಪಯೋಗಿಸುತ್ತಿರುವವರಿಂದ ಅನೇಕ ಆರಾಧನಾ ಸ್ಥಳಗಳು ಕಟ್ಟಲ್ಪಟ್ಟವು.

ಎಲೀಷನು ಅವರಿಗೆ, "ಹೋಗಬಹದು" (ವಚನ 2ಬಿ) ಎಂದು ಹೇಳಿದನು, ಆದರೆ ಒಬ್ಬ ಪ್ರವಾದಿ ಮಂಡಲಿಯವನೊಬ್ಬನು "ದಯವಿಟ್ಟು ನೀನೂ ನಿನ್ನ ಸೇವಕರಾದ ನಮ್ಮ ಜೊತೆಯಲ್ಲಿ ಬರಬೇಕು" (ವಚನ 3ಎ) ಎಂದು ಆತನನ್ನು ತಮ್ಮೊಡನೆ ಬರುವುದಕ್ಕೆ ಒತ್ತಾಯಿಸಿದನು. ಆ ಭಿನ್ನಹವು ಗೌರವವನ್ನೂ ಮತ್ತು ವಾತ್ಸಲ್ಯವನ್ನು ಸೂಚಿಸುವುದಾಗಿತ್ತು (ತಮ್ಮ ವಿದ್ಯಾರ್ಥಿಗಳಿಗೆ ತಮ್ಮ ಜೊತೆ ಇರುವದು ಬೇಡವಾದ ಶಿಕ್ಷಕರು ಇರುತ್ತಾರೆ). ಎಲೀಷನು ಆಗ "ಬರುತ್ತೇನೆ" ಎಂದು ಹೇಳಿ "ಅವರೊಡನೆ ಹೊರಟನು" (ವಚನಗಳು 3ಬಿ, 4ಎ).

ಅವರು ಯೋರ್ದನ ಹೊಳೆಯನ್ನು ಮುಟ್ಟಿದೊಡನೆ ಅವರು "ಮರಗಳನ್ನು ಕಡಿಯಲು" ಆರಂಭಿಸಿ (ವಚನ 4ಬಿ) ಹೊಳೆಯ ಹತ್ತಿರವೇ ದೊಡ್ಡ ದಿಮ್ಮಿಗಳ ಗುಡಿಸಲಿನ ತರಹದ್ದನ್ನು ಮಾಡಿದರು. ಪ್ರಾಯಶಃ ಎಲೀಷನೂ ಕೂಡ ಆ ವಿದ್ಯಾರ್ಥಿಗಳೊಂದಿಗೆ ಅಲ್ಲೇ ಕೆಲಸ ಮಾಡುತ್ತಿರಬಹುದು. ಹಿಂದೆ, ಬೋಧಕರು ಸುವಾರ್ತಾ ಕೂಟಗಳಿಗಾಗಿ ಸಮಿತಿಗಳನ್ನು ಮಾಡುವಂತೆ, ಅವರು ಯಾವಾಗಲೂ ಹಗಲಿನ ಆರಂಭದಲ್ಲಿ ಹೊಲಗಳಲ್ಲಿ ದುಡಿಯುತ್ತಿದ್ದರು ಮತ್ತು ರಾತ್ರಿ ಬೋಧಿಸುತ್ತಿದ್ದರು.

**ಮಾನವನು ಏನು ಮಾಡಲಾರ**

ನಾನು ಕೊಡಲಿಯ ಪೆಟ್ಟುಗಳನ್ನು ಕೇಳಬಲ್ಲೆ, ಮತ್ತು ಆ ವಿದ್ಯಾರ್ಥಿಗಳ ಹುಬ್ಬಿನಿಂದ ಬೀಳುತ್ತಿರುವ ಬೆವರನ್ನು ನಾನು ನೋಡಬಲ್ಲೆ. ಒಮ್ಮೆಲೇ, ಆ ಜನರಲ್ಲಿ ಒಬ್ಬನಿಂದ ಒಂದು ಕೂಗು ಕೇಳಿ ಬಂತು. "ಮರಗಳನ್ನು ಕಡಿಯುತ್ತಿರುವಾಗ [ದಿಮ್ಮಿಗಳನ್ನು ಮಾಡಲು] ಒಬ್ಬನ ಕೊಡಲಿಯ ಕಾವು ತಪ್ಪಿ ನೀರೊಳಗೆ ಬಿತ್ತು" (ವಚನ 5ಎ) ಇದು ಅಸಹಜವಾದದ್ದೇನಲ್ಲ (ನೋಡಿರಿ ಧರ್ಮೋಪದೇಶಕಾಂಡ 19:4, 5); ಸಾಮಾನ್ಯವಾಗಿ, ಇದು ಪ್ರಸ್ತುತವಾಗಿ ಸಮಸ್ಯೆಯೂ ಕೂಡಾ ಆಗದು. ನಾನು ತರುಣಾನಾಗಿದ್ದಾಗ, ಉರುವಲಿಗೆಂದು ಕಟ್ಟಿಗೆಯನ್ನು ಕಡಿಯಬೇಕಿತ್ತು, ಆಗ ನನ್ನ ಕೊಡಲಿಯ ಕಾವು ಯಾವಾಗಲೊಮ್ಮೆ ಹಾರಿ ಬೀಳುತ್ತಿತ್ತು. ನಾನು ಆ ಕಾವನ್ನು ಹುಡುಕಿ ಅದರ ಕಟ್ಟಿಗೆಗೆ ಸುರಕ್ಷಿತವಾಗಿ ಸಿಕ್ಕಿಸುತ್ತಿದ್ದೆನು ಮತ್ತು ತಿರುಗಿ ಕಡಿಯುವ ಕಾರ್ಯದಲ್ಲಿ ತೊಡಗುತ್ತಿದೆನು. ಆ ಸಂದರ್ಭದಲ್ಲಿ, ಹೇಗೋ ಈ ತರಬೇತುದಾರರು ನದಿಯ ಹತ್ತಿರವಿರುವ ಮರವನ್ನು ಕಡಿಯುತ್ತಿದ್ದರು ಮತ್ತು ಕೊಡಲಿಯ ಕಾವು ಯೊರ್ದನಿನ "[ಮಸಕಾದ] ನೀರಿನಲ್ಲಿ ಬಿದ್ದಿತು" (2 ಅರಸು 6:5ಬಿ). ಆ ಮನುಷ್ಯನು ಜೋರಾಗಿ ಕೂಗುತ್ತಾ "ಅಯ್ಯೋ ಸ್ವಾಮೀ ನಾನು ಅದನ್ನು ಎರವಾಗಿ ತಂದಿದ್ದೆ" (ವಚನ 5ಸಿ) ಎಂದು ಕೂಗಿದನು.

ಇದು ನಿನಗೆ ಅಷ್ಟೇನೂ ಗಂಭೀರವಾದ ಸಮಸ್ಯೆಯಾಗಿ ಕಾರಣಲಾರದು ಅಥವಾ ಕಾಣಿಸದಿರದು, ಆದರೆ ಆ ಮನುಷ್ಯನ ದೃಷ್ಟಿಕೋನದಿಂದ ಆ ಪರಿಸ್ಥಿತಿಯನ್ನು ನೋಡಿರಿ.

ಆತನು ಹತ್ತಿರವಿರುವ ಕಬ್ಬಿಣದ ಅಂಗಡಿಗೆ ಹೋಗಿ ಕಳೆದ ಕೊಡಲಿಗೆ ಬದಲಾಗಿ ಇನ್ನೊಂದು ಕೊಡಲಿಯನ್ನು ಕೊಂಡುಕೊಂಡು ಬರಲಾರನು. ಕಬ್ಬಿಣದ ಸಾಧನಗಳು ಆ ಕಾಷ್ಟ್ರದಲ್ಲಿ ಕಡಿಮೆ ಪೂರೈಕೆಯಾಗುತ್ತಿದ್ದವು (ನೋಡಿರಿ 1 ಸಮುವೇಲ 13:22). ಮತ್ತು ಬಲು ಬೆಲೆಯೂ ಅವುಗಳಿರುತ್ತಿತ್ತು. ಮುಂದೆ ಆ ಮನುಷ್ಯನು ಹೆಚ್ಚೂ ಕಡಿಮೆ ನಿಶ್ಚಿತವಾಗಿ ಕೊಡಲಿಯ ಕಾವುಗಳು ಹೇರಳವಾಗಿದ್ದರೂ ಕೂಡಾ ಕೊಂಡು ಹಿಂತಿರುಗಿಸಲು ಅಸಮರ್ಥನಾಗಿದ್ದನು. "ಎರವಾಗಿ" ಎಂಬ ಪದದ ಅರ್ಥವು "ಬೇಡಿಕೊಂಡು" ಎಂದಾಗಿದೆ. ಆ ಮನುಷ್ಯನು ಮಾಲಿಕನ ಮುಂದೆ *ಭಿಕ್ಷೆ* ಬೇಡಿಕೊಂಡಾಗ ಆತನು ಅವನಿಗೆ ಕೊಡಲಿಯನ್ನು ಎರವಾಗಿ ತೆಗೆದುಕೊಂಡು ಹೋಗುವುದಕ್ಕೆ ಬಿಟ್ಟಿದ್ದನು - ಮತ್ತು ಈಗ ಅದು ಹೋಯಿತು!

ಇಂದು ಕೆಲವರು ಎರವಾಗಿ ತೆಗೆದುಕೊಂಡು ಬಂದ ಸಂಗತಿಗಳ ವಿಷಯದಲ್ಲಿ ಅಜಾಗರೂಕರಾಗಿರುತ್ತಾರೆ, ಆದರೆ ಮೋಶೆಯ ಧರ್ಮಶಾಸ್ತ್ರವು ಎರವಾಗಿ ತಂದಂತಹ ಸಂಗತಿಗಳ ಬಗೆಗೆ ಗಂಭೀರವಾಗಿ ಪರಿಗಣಿಸುವುದಾಗಿದೆ. ಒಬ್ಬ ವ್ಯಕ್ತಿಯು ತಾನು ಎರವಾಗಿ ತಂದಂತವುಗಳನ್ನು ಕಳದದ್ದಾದರೆ ಹಿಂದಕ್ಕೆ ಕೊಡುವ ವ್ಯವಸ್ಥೆಯನ್ನು ಮಾಡಬೇಕು (ನೋಡಿರಿ ವಿಮೋಚನಕಾಂಡ 22:14) ಬಡತನದಿಂದ ಬಳಲುತ್ತಿದ್ದ ವಿದ್ಯಾರ್ಥಿಗಳು ಇದನ್ನು ಮಾಡಲು ಅಸಮರ್ಥರಾಗುತ್ತಿದ್ದರು. ಹೀಗೆ ಆತನು ಅದರ ಮೌಲ್ಯದಂತೆ ಗುಲಾಮನಾಗಿ ಕೆಲಸವನ್ನು ಪಡೆಯುವ ನಿರೀಕ್ಷಣೆಯನ್ನು ಆತನು ಎದುರಿಸುವವನಾಗಿರುತ್ತಿದ್ದನು.[4] ಆಮೋಸ 2:6ರ ಪ್ರಕಾರ ಇಸ್ರಾಯೇಲಿನ ಪ್ರಜೆಗಳಾದ ಅಧಾರ್ಮಿಕ ವ್ಯಕ್ತಿಗಳು "ಅವಶ್ಯಕತೆಯುಳ್ಳವರಿಗೆ ಒಂದು ಜೋಡಿ ಕೆರವನ್ನೂ ಕೂಡ" ಮಾರದೇ ಇರುವವರಾಗಿರುತ್ತಾರೆ. ಇದು ಆ ಯೌವನಸ್ಥನಿಗೆ ಬಹು ನೈಜವಾದ ಮತ್ತು ಬಲು ಗಂಭೀರವಾದ ಸಮಸ್ಯೆಯಾಗಿ ಪರಿಣಮಿಸಿತು. ಹೀಗಾಗಿ ಆತನು ಎಲೀಷನನ್ನು ಕೂಗಿದನು.

ಎಲೀಷನು ಆ ಮನುಷ್ಯನಿಗೆ "ಅದು ಎಲ್ಲಿ ಬಿದ್ದಿತು?" (2 ಅರಸು 6:6ಅ) ಎಂದು ಕೇಳಿದನು. ಕೆಲಸಾರಿ ದೇವರು ಪ್ರವಾದಿಗೆ ಅಲೌಕಿಕವಾದ ಜ್ಞಾನವನ್ನು ಕೊಡುತ್ತಿದ್ದನು (5:25, 26; 6:8-12), ಮತ್ತು ಕೆಲಸಾರಿ ಕೊಡುತ್ತಿರಲಿಲ್ಲ (4:27). ವಾಸ್ತವವಾಗಿ, ನೈಸರ್ಗಿಕ ರೀತಿಯಲ್ಲಿ ಆತನು ಸಂರಕ್ಷಿಸಬೇಕಾದ ಮಾಹಿತಿಯನ್ನು ದೇವರು ಪ್ರವಾದಿಗೆ ಕೊಟ್ಟಿರಲಿಲ್ಲ. ಹೀಗಾಗಿ ಎಲೀಷನು ಆಘಾತಕ್ಕೆ ಒಳಗಾದ ವಿದ್ಯಾರ್ಥಿಗೆ ಕೊಡಲಿಯ ಕಾವು ನೀರಿನಲ್ಲಿ ಯಾವ ಸ್ಥಳದಲ್ಲಿ ಬಿದ್ದಿದೆ ಎಂದು ಕೇಳಿದನು.

ಆ ಮನುಷ್ಯನು ತಾನು ನೀರು ಸಿಡಿದಂಥದ್ದನ್ನು ಕಂಡಂತಹ ಸ್ಥಳವನ್ನು ತೋರಿಸಿದನು. "ಅದು ಬಿದ್ದ ಸ್ಥಳವನ್ನು ಅವನು ತೋರಿಸಿದನು. ಆಗ ದೇವರು ಮನುಷ್ಯನು [ಎಲೀಷನು] ಒಂದು ತುಂಡು ಕಟ್ಟಿಗೆಯನ್ನು [ಅಲ್ಲಿನ ಮರದಿಂದ] ಕಡಿದು ಅಲ್ಲಿ ಹಾಕಿದನು; ಕೂಡಲೆ ಕೊಡಲಿಯು ತೇಲಾಡಿತು" (6:6ಬಿ). ಆತನು ಹಾಗೆ ಮಾಡಿದಾಗ, ಒಂದು ಆಶ್ಚರ್ಯಕರವಾದ ಸಂಗತಿಯು ನೆರವೇರಿತು: ವೇದಭಾಗವು ಹೇಳುವಂತೆ ಆತನ ಆ ಕಾರ್ಯವು "ಕಬ್ಬಿಣದ ಕೊಡಲಿಯನ್ನು ತೇಲಾಡುವಂತೆ ಮಾಡಿತು" (ವಚನ 6ಸಿ).

ಅಂದು ಯೊರ್ದನ ನದಿಯ ದಡದಲ್ಲಿ ಏನು ಸಂಭವಿಸಿತೆಂದು ತಾರ್ಕಿಕವಾದ ವಿವರಣೆಗಳನ್ನು ಕಂಡು ಹಿಡಿಯಲು ನಾಸ್ತಿಕರು ಶ್ರಮವಹಿಸಿದ್ದಾರೆ. ಎಲೀಷನು ಒಂದು ರೀತಿಯಲ್ಲಿ "ಮೀನು ಹಿಡಿಯುವಂತೆ" ಕೊಡಲಿಯ ಕಾವನ್ನು ಅದರ ಕಟ್ಟಿಗೆಯೊಡನೆ ಹೊರಗೆ ತೆಗೆದನು ಎಂದು ಅವರು ಸೂಚಿಸುವವರಾಗಿದ್ದಾರೆ.[5] G. Rawlinson ರವರ ಪ್ರತಿಕ್ರಿಯೆಯು ಗುರಿಯ ಮೇಲೆಯೇ ಇದೆ: "ಪವಿತ್ರ ಲೇಖಕರು ಕೈಯಿಂದ ಮಾಡುವ ಕೌಶಲ್ಯವನ್ನು ದಾಖಲಿಸುವ ಕೇವಲವಾದ ಕಾರ್ಯಗಳ ಬಗೆಗೆ ಅಷ್ಟೊಂದು ಕಾಳಜಿಯುಳ್ಳವರಾಗಿಲಿಲ್ಲ.[6]

ಲೇಖಕರ ಭಾಷೆಯು ತುಂಬಾ ಸ್ಪಷ್ಟವಾಗಿದೆ: ಭಾರವಾದ, ಗಟ್ಟಿಯಾದ ಕಬ್ಬಿಣದ ಕಾವು ತೇಲುತ್ತಿದೆ. ಅದು ನೀರಿನಿಂದ ಮೇಲಕ್ಕೆ ಜಿಗಿದು ಬಂದು ಕಾಕ್‌ನಂತೆ ತೂಗಾಡಿತು. ನಾನು ಕೆಲ ಕಲ್ಲುಗಳನ್ನು ನದಿಯಲ್ಲಿ ಎಸೆದೆನು, ಅವುಗಳಲ್ಲಿ ಒಂದೂ ನೀರಿನ ಮೇಲ್ಮೈಯಲ್ಲಿ ತೇಲ

ಅಿಲ್ಲ. ನಾನು ಒಂದು ಅಥವಾ ಎರಡು ಕೋಲನ್ನು ನನ್ನ ಕೈಯಿಂದ ಎಸೆದೆನು ಮತ್ತು ನೀರು ಮೇಲಕ್ಕೆ ಬಂದು ಹೋಯಿತು ಮತ್ತು ನಾನು ಎಂದಿಗೂ ಅದನ್ನು ತಿರುಗಿ ಕಾಣಲಿಲ್ಲ. ಅದು ಒಂದು ಅಪ್ಪಟವಾದ ಅದ್ಭುತಕಾರ್ಯವಾಗಿದ್ದು ನೀನು ಅದರ ಬಗೆಗೆ ಸಂಶಯಿಸದಿರು. ಇದು ನಿಜವಾಗಿಯೂ ಆಡಂಬರವಿಲ್ಲದ ಅದ್ಭುತವಾಗಿದೆ ಎಂಬುದು ನಿಜವಾದದು ಆಗಿದೆ, ಇದು ಅದ್ಭುತ ಕಾರ್ಯವಲ್ಲದೆ ಮತ್ತೇನೋ ಅಲ್ಲ!

ತನ್ನ ಅಭ್ಯಾಸದಂತೆ, ಆತನು (ಎಲೀಷನು) ಅದ್ಭುತಗಳನ್ನು ಹೊಂದಿದ ವ್ಯಕ್ತಿಗಳನ್ನು ಒಳಪಡಿಸಿಕೊಂಡನು. ಆತನು ಆ ಯೌವನಸ್ಥನಿಗೆ, "ತೆಗೆದು ಕೋ" (ವಚನ 7ಎ) ಎಂದು ಹೇಳಿದನು. ಆ ರೀತಿಯಲ್ಲಿ ಈ ಅದ್ಭುತ ಕಾರ್ಯವು ಕೇವಲ ನೈಸರ್ಗಿಕ ಕಾರ್ಯಗಳಲ್ಲಿ ಆಗಿಲ್ಲ ಎಂದು ಮನುಷ್ಯನು ಅರಿತುಕೊಳ್ಳಬೇಕೆಂದು ಆತನು ಹೀಗೆ ಮಾಡಿದನು. ಆ ವಿದ್ಯಾರ್ಥಿಯು ನೀರಿನಲ್ಲಿ ನಡೆದನು ಮತ್ತು "ಕೈ ಚಾಚಿ ಅದನ್ನು ತೆಗೆದುಕೊಂಡನು" (ವಚನ 7ಬಿ). ಆತನು ಕೃತಜ್ಞತೆಯನ್ನು ವ್ಯಕ್ತಪಡಿಸಿದ ಮೇಲೆ ಮತ್ತು ತನ್ನ ಸಾಧನವನ್ನು ಜೋಡಿಸಿಕೊಂಡ ನಂತರ, ಆ ಮನುಷ್ಯನು ಖಚಿತವಾಗಿ, ಇತರರೊಂದಿಗೆ ಇನ್ನೊಂದು ಮರವನ್ನು ಕಡಿಯುವ ಕೆಲಸಕ್ಕೆ ಮರಳಿರಬಹುದು. ಆದರೆ ಈ ಸಾರಿ ಆತನು ನದಿಯ ಇನ್ನೂ ದೂರದಲ್ಲಿ ನಡೆದಿರಬಹುದು.

## ಇಂದಿನ ಕ್ಷುಲ್ಲಕವಾದ ಸಮಸ್ಯೆ

ಇಂದು ನೀವೂ ಸಹ ನಿಮ್ಮ ಸಮಸ್ಯೆಗಳ ಬಲು ಕ್ಷುಲ್ಲಕವಾದವು ಎಂದೆಣಿಸಿ ಅವುಗಳನ್ನು ದೇವರ ಮುಂದೆ ತೆಗೆದುಕೊಳ್ಳದೆ ಹೋಗುವ ಸಾಧ್ಯತೆಗಳು ಇವೆಯೇ? ಪ್ರಾಯಶಃ ನೀವು ಈ ಕಾರಣಗಳನ್ನು ಕೊಡಬಹುದು. "ಆತನು ಇಡೀ ಸೃಷ್ಟಿಯನ್ನು ಮತ್ತು ರಾಷ್ಟ್ರೀಯ ಸಮಸ್ಯೆ ಮತ್ತು ಅಂತರರಾಷ್ಟ್ರೀಯ ಸಂಘರ್ಷಗಳ ಬಗೆಗೆ ಕಾಳಜಿವಹಿಸುವವನಾಗಿದ್ದಾನೆ. ಹೀಗಿದ್ದಾಗ ನಾನು ನನ್ನ, ಸಣ್ಣ ಸಮಸ್ಯೆಗಳಿಂದ ಆತನನ್ನು ಪೀಡಿಸಲು ನನಗೆ ಮನಸ್ಸಿಲ್ಲ." ಆತನ ಮಕ್ಕಳಿಗೆ ಸಂಬಂಧಿಸಿದ್ದು ಏನಾದರೂ ಇದ್ದರೆ ಅದು ದೇವರಿಗೂ ಸಂಬಂಧಿಸಿದಂತಹದ್ದಾಗಿರುತ್ತದೆ ಎಂಬುದನ್ನು ನಮ್ಮ ಕಥೆಯಿಂದ ಕಲಿತುಕೊಳ್ಳಿರಿ.

ಇದನ್ನು ಬರೆಯುತ್ತಿದ್ದಂತೆಯೇ, ನಾನು ನನ್ನ ಹೆಂಡತಿ ಇಬ್ಬರು ನಮ್ಮ ಮಗಳಾದ ಆ್ಯಂಗಿ, ಅವಳ ಗಂಡ ಡ್ಯಾನ್‌ನೊಡನೆ ಮತ್ತು ಅವರ ಹೊಸದಾದ ದತ್ತು ಮಗು ಎಲೀಯನೊಡನೆ ಕಾಲ ಕಳೆಯುತ್ತಿದ್ದೆವು. ಎಲೀಯನು ಸಮಯದಿಂದ ಸಮಯಕ್ಕೆ ಅಳುತ್ತಿದ್ದನು (ಶಿಸುಗಳು ಅಳುವ ಹಾಗೆ). ಬಹುಶಃ ಆತನು ಹಸಿದಿರಬಹುದು ಅಥವಾ ಆತನ ಬಟ್ಟೆಯನ್ನು ಬದಲಾಯಿಸುವ ಅವಶ್ಯಕತೆಯು ಇತ್ತು, ಅಥವಾ ಕೇವಲ ಅಳುವ ಇಚ್ಛೆಯು ಆತನದಾಗಿರಬಹುದು. ಆತನ ತಂದೆತಾಯಿಗಳು "ಎಂತಹ ಕ್ಷುಲಕ ಸಂಗತಿಗಾಗಿ ಅಳುತ್ತಿದ್ದಿಯಲ್ಲ" ಎಂದು ಆತನನ್ನು ಗದರಿಸಿದರು ಎಂದು ಯೋಚಿಸುತ್ತೀರಾ? ಅವರು ಹಾಗೆ ಮಾಡಿರಲಾರರು ಎಂದು ನೀವು ತಿಳಿದಿದ್ದೀರಿ. ಅವರು ಆತನನ್ನು ತಮ್ಮ ತೋಳುಗಳಲ್ಲಿ ತೆಗೆದು ಕೊಂಡರು ಮತ್ತು ಸಮಾಧಾನ ಮಾಡಿದರು ಹಾಗೂ ಆತನ ಅವಶ್ಯಕತೆಗಳನ್ನು ನೀಗಿಸಿದರು. ಅದು ಎಷ್ಟೇ ಚಿಕ್ಕ ಸಂಗತಿಯಾಗಿದ್ದರೂ ಕೂಡಾ. "ದೇವರ ಮಕ್ಕಳೆಂಬ ಹೆಸರನ್ನು ನಮಗೆ ಕೊಡುವದರಲ್ಲಿ ತಂದೆಯು ಎಂಥಾ ಪ್ರೀತಿಯನ್ನು ನಮ್ಮ ಮೇಲೆ ಇಟ್ಟಿದ್ದಾನೆ ನೋಡಿರಿ" (1 ಯೋಹಾನ 3:1ಎ).

ಜಗತ್ತಿನ ಸುತ್ತಲೂ ನೋಡಿರಿ. ದೇವರು "ದೊಡ್ಡ" ಸಂಗತಿಗಳಿಗೆ ಕಾಳಜಿಯನ್ನು ತೋರುವ ಹಾಗೆ "ಚಿಕ್ಕ" ಸಂಗತಿಗಳಿಗೂ ತೋರುವವನಾಗಿದ್ದಾನೆ. ಚಿಟ್ಟೆಯ ರೆಕ್ಕೆಗಳು. ಆಕಾಶದಲ್ಲಿನ ಬಲು ಅದ್ಭುತವಾದ ತಾರೆಗಳು ಇರುವಂತೆಯೇ ಕಾಳಜೀಪೂರಕಾವಾಗಿ ಹೆಣೆದಂತೆ ಇರುತ್ತವೆ. ನಿಲ್ಲಿ ಮತ್ತು ಯೋಚಿಸಿರಿ: ಜಾಗತಿಕ ಅಘಾತಗಳ ಜೊತೆ ಇದು ನಿಜವಾಗಿಯೂ ಕರ್ತನಿಗೆ "ದೊಡ್ಡ" ಸಮಸ್ಯೆಯಿಲ್ಲ. "ಕ್ಷುಲ್ಲಕವಾದ" ಸಮಸ್ಯೆಯು ವಿಶ್ವಾಸಿಯಿಂದ ಎದುರಿಸಲ್ಪಟ್ಟಾಗ ಅದು ಆತನಿಗೆ ಅವಿಶ್ವಾಸಿಯು ಎದುರಿಸುವಂತಹ ಯಾವುದೇ "ನೆಲನಡಿಗಿಸುವಂತಹ" ಕಠಿಣ

ಕಾಲಕ್ಕಿಂತಲೂ ಶ್ರೇಷ್ಟವಾದ ಕಳಕಳಿಯನ್ನು ಆತನು ಹೊಂದಿರುತ್ತಾನೆ.

ಭಾಗದಿಂದ ಭಾಗವು ಆತನ ಮುಂದೆ *ಪ್ರತಿಯೊಂದು* ಸಮಸ್ಯೆಗಳನ್ನು ಅವುಗಳು "ಕ್ಷುಲ್ಲಕ" ಎಂದು ವರ್ಗೀಕರಿಸಿದ್ದಾಗ್ಯೂ ಕೂಡ ಆತನ ಮುಂದೆ ತರುವಂತೆ ಪ್ರೇರೇಪಿಸುವವು ಗಳಾಗಿವೆ. ಪೌಲನು "ಯಾವ ಸಂಬಂಧವಾಗಿಯೂ ಚಿಂತೆ ಮಾಡದೆ *ಸರ್ವ ವಿಷಯದಲ್ಲಿ* ದೇವರ ಮುಂದೆ ಕೃತಜ್ಞತಾ ಸ್ತುತಿಯನ್ನೂ ಪ್ರಾರ್ಥನೆ ವಿಜ್ಞಾಪನೆಗಳನ್ನೂ ಮಾಡುತ್ತಾ ನಿಮಗೆ ಬೇಕಾದದ್ದನ್ನು ತಿಳಿಯಪಡಿಸಿರಿ" (ಫಿಲಿಪ್ಪಿ 4:6; ಒತ್ತಿ ಹೇಳಿದ್ದು ನನ್ನದು). ಪೌಲನು ಹೀಗೆ ಬರೆಯುತ್ತಾನೆ. "ನಿಮ್ಮ *ಚಿಂತೆಯನ್ನೆಲ್ಲಾ* ಆತನ ಮೇಲೆ ಹಾಕಿರಿ, ಆತನು ನಿಮಗೋಸ್ಕರ ಚಿಂತಿಸುತ್ತಾನೆ" (1 ಪೇತ್ರ 5:7; ಒತ್ತಿ ಹೇಳಿದ್ದು ನನ್ನದು).

## ಮುಕ್ತಾಯ

ನೀನು ದೇವರ ಮಗುವಾಗಿದ್ದರೆ, ನೀನು ಹೊಂದಿರುವ ಯಾವ ಸಮಸ್ಯೆಯನ್ನೂ ಕ್ಷುಲ್ಲಕ ಎಂದು ದೇವರು ಎಣಿಸುವುದಿಲ್ಲ. "ದೇವರು ನಿನ್ನ ಬಲು ನಮ್ರವಾದ ಸಮಯಕ್ಕಾಗಿನ ಪ್ರಾರ್ಥನೆಗೆ ಆತನು ಉತ್ತರಿಸುವನು ಮತ್ತು ನಿನ್ನ ಚಿಕ್ಕ ಅವಶ್ಯಕತೆಯನ್ನೂ ಪೂರ್ಣಗೊಳಿಸುವನು ನೀನು ಆತನಲ್ಲಿ ಪ್ರೀತಿಯನ್ನೂ ಮತ್ತು ವಿಶ್ವಾಸವನ್ನೂ ಹೊಂದಿದ್ದಾದರೆ ಮಾತ್ರ."[8]

ದೇವರು ವಿಶೇಷವಾಗಿ ನಮ್ಮ *ಆತ್ಮೀಕ* ಸಮಸ್ಯೆಗಳ ಬಗೆಗೆ ಕಾಳಜಿಯುಳ್ಳವನಾಗಿರುತ್ತಾನೆ ಅವು ಎಷ್ಟೇ "ಚಿಕ್ಕ" ವುಗಳಾಗಿರಲಿ ಅವುಗಳು ಐಹೀಕ ಮನಸ್ಸಿನಿಂದ ಇರುವಂತೆ ಕಾಣುವವುಗಳಾಗಿವೆ. ನಿನ್ನ ಆತ್ಮೀಕ ಸಮಸ್ಯೆಯು ನಿನ್ನನ್ನು ಕೆಳಗೆ ಎಳೆಯುತ್ತಿದ್ದರೆ, ಇಂದು ನೀವು ದೇವರ ತಾಳ್ಮೆ ಮತ್ತು ಕರುಣೆಯಲ್ಲಿ ಬಿಡುಗಡೆ ಹೊಂದಿದಾಗ ಆತನು ನಿನ್ನನ್ನು ಮೇಲಕ್ಕೆ ಎತ್ತುವನು. ಯಾರು ಕೊಡಲಿಯ ಕಾವನ್ನು ಹಾರುವಂತೆ ಮಾಡಿದರೂ ಆತನೇ ನಿನ್ನ ಪಾಪಗಳನ್ನು ಅತೀ ದೂರಕ್ಕೆ ಹಾರುವಂತೆ ಮಾಡುವನು.

---

ಟಿಪ್ಪಣಿಗಳು

[1]Robert C. Dentan, "Kings," *Layman's Bible Commentary*, vol. 7 (Richmond, Va.: John Knox Press, 1964), 83. [2]James Burton Coffman and Thelma B. Coffman, *Commentary on Second Kings,* James Burton Coffman Commentaries, The Historical Books, vol. 6 (Abilene, Tex.: A.C.U. Press, 1992), 77. [3]G. Rawlinson, "2 Kings," *The Pulpit Commentary*, vol. 5, *1 & 2 Kings,* ed. H. D. M. Spence and Joseph S. Exell (Grand Rapids, Mich.: Wm. B. Eerdmans Publishing Co., 1950), 119. Rawlinson cited Josephus *Wars* 4.8.3 and Strabo *Geography* 15.1.2.41. [4]J. Robert Vannoy, notes on 2 Kings, *The NIV Study Bible,* ed. Kenneth Barker (Grand Rapids, Mich.: Zondervan Publishing House, 1985), 533. J. H. Stek, "Elisha," in *The International Standard Bible Encyclopedia*, rev., ed. Geoffrey W. Bromiley ಯಲ್ಲಿ ಇದೇ ವಿಚಾರವು ಸೂಚಿತವಾಗಿದೆ (Grand Rapids, Mich.: Wm. B. Eerdmans Publishing Co., 1982), 2:71. [5]ಕೆಲ "ವಿವರಗಳು" ಕೊಡಲಿಯ ಕಾವು ಎಲೀಷನಿಗೆ ಸ್ಪಷ್ಟವಾಗಿ ಕಾಣುವಂತೆ ನೀರು ಸ್ಪಷ್ಟವಾಗಿತ್ತು ಎಂದು ಸಮರ್ಥಿಸುವವುಗಳಾಗಿವೆ. ಆ ರೀತಿಯಾಗಿದ್ದಲ್ಲಿ ಆ ವಿದ್ಯಾರ್ಥಿಯು ತಾನೇ ಅದನ್ನು ಹೊರಗೆ ತರಬಹುದಿತ್ತು. [6]Rawlinson, 120. [7]J. G. B., *Short Meditations on Elisha* (New York: Loizeaux Brothers, n.d.), 39 ದಿಂದ ಎರವಲು ತೆಗೆದುಕೊಳ್ಳಲಾಗಿದೆ. [8]Elaine J. Fletcher, *Elisha, the Miracle Prophet* (Washington, DC: Review and Herald Publishing Association, 1960), 43.